

بِسۡمِ اللّٰہِ الرَّحۡمٰنِ الرَّحِیۡمِ

# ಸಾಹಿಬ್‌ಝಾದ ಮಿರ್ಝಾ ಗುಲಾಮ್ ಅಹ್ಮದ್ – ಅಲ್ಲಾಹನ ನಿಜವಾದ ಸೇವಕ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **09-02-2018** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಆಯಿಶ ರಝಿಯಲ್ಲಾಹು ಅನ್‌ಹರಿಂದ ಹೀಗೆ ವರದಿಯಾಗಿದೆ: ಒಂದು ಮಯ್ಯತ್ತಿನ ಜನಾಝ ನಮಾಝ್ ಒಂದು ನೂರು ಮುಸ್ಲಿಮರು ನಿರ್ವಹಿಸಿ ಅವರೆಲ್ಲರೂ ಮೃತನಿಗೋಸ್ಕರ ಕ್ಷಮೆಯನ್ನು ಬೇಡಿಕೊಂಡರೆ, ಕ್ಷಮೆಗೋಸ್ಕರ ಮಾಡುವ ಆ ಶಿಫಾರಸು ಅಲ್ಲಾಹನಿಂದ ಅಂಗೀಕರಿಸಲ್ಪಡುವುದು. ಇನ್ನೊಂದು ವರದಿ ಹೀಗಿದೆ: ಒಂದು ಜನಾಝ ಹೋಗುತ್ತಿದ್ದಾಗ ಜನರು ಮೃತನ ಸದ್ಗುಣಗಳ ಬಗ್ಗೆ ಹೊಗಳಲು ಪ್ರಾರಂಭಿಸಿದರು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಮೃತನಿಗೆ ಸ್ವರ್ಗ ವಾಜಿಬ್ (ಕಡ್ಡಾಯ) ಆಗಿದೆ. ಇಂದು ಎರಡು ಜನಾಝಗಳ ನಮಾಝನ್ನು ನಿರ್ವಹಿಸಲಿದ್ದುದರಿಂದ ನಾನು ಯೋಚಿಸಿದೆ ಈ ದಿನ ಜನಾಝ ನಮಾಝ್ ಮತ್ತು ದಫನ್‌ಗೆ ಸಂಬಂಧಿಸಿ ಕೆಲವು ಹದೀಸುಗಳನ್ನು ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಉದ್ಧರಣಿಗಳನ್ನು, ಕರ್ಮಶಾಸ್ತ್ರಕ್ಕೆ ಸಂಬಂಧಿಸಿದ ವಿಷಯಗಳನ್ನು ವಿವರಿಸಿ ಅನಂತರ ಮೃತರ ಬಗ್ಗೆ ವಿವರಿಸುವೆನು ಎಂದು. ಆದರೆ ಈ ದಿನ ಹಾಗೆ ಮಾಡಲು ಸಾಧ್ಯವಾಗಲಾರದು. ಏಕೆಂದರೆ ಜಮಾಅತಿಗೆ ಸೇವೆ ಸಲ್ಲಿಸಿದ, ತನ್ನ ವಕ್ಫ್‌ನ ಝಿಂದಗಿಯನ್ನು ನಿಷ್ಠೆಯಿಂದ ಈಡೇರಿಸಿದ, ಖಿಲಾಫತ್‌ಗೆ ವಿಧೇಯನಾಗಿ ಜೀವಿಸಿದ ಒಬ್ಬರ ಬಗ್ಗೆ ನಾನು ವಿವರಿಸಲು ಇಚ್ಛಿಸುತ್ತೇನೆ. ಅವರ ಬಗ್ಗೆ ದೊರೆತ ಮಾಹಿತಿಗಳನ್ನು ಪೂರ್ಣವಾಗಿ ವಿವರಿಸುವುದು ಕಷ್ಟಕರವಾಗಿವೆ. ಅವರಿಗೆ ಸಂಬಂಧಿಸಿದ ಘಟನೆಗಳು ವಾಕಿಫೆ ಝಿಂದಗಿ ಆಗಿರುವ ಪ್ರತಿಯೊಬ್ಬರಿಗೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕುಟುಂಬದವರಿಗೆ, ಜಮಾಅತಿನ ಹುದ್ದೇದಾರರಿಗೆ ಮತ್ತು ವ್ಯಕ್ತಿಗಳಿಗೆ ಅನೇಕ ವಿಧಗಳಲ್ಲಿ ಮಾರ್ಗದರ್ಶನ ನೀಡುವವುಗಳಾಗಿವೆ ಮತ್ತು ಅನುಕರಣೆ ಮಾಡಲು ಯೋಗ್ಯವಾಗಿವೆ. ನಿಮಗೆ ತಿಳಿದಿರುವಂತೆ ಕೆಲವು ದಿನಗಳ ಹಿಂದೆ ಮುಕರ್ರಮ್ ಸಾಹಿಬ್‌ಝಾದ ಮಿರ್ಝಾ ಗುಲಾಮ್ ಅಹ್ಮದ್ ಸಾಹಿಬ್ ಇಬ್ನು ಹಝ್ರತ್ ಸಾಹಿಬ್‌ಝಾದ ಮಿರ್ಝಾ ಅಝೀಝ್ ಅಹ್ಮದ್ ಸಾಹಿಬ್(ರ) ತನ್ನ 78ನೇ ವರ್ಷ ಪ್ರಾಯದಲ್ಲಿ ನಿಧನ ಹೊಂದಿದರು – إِنَّا لِلّٰهِ وَإِنَّا إِلَيْهِ رَاجِعُونَ. ಅವರು ಅಚಾನಕವಾಗಿ ಹೃದಯ ಸ್ತಂಭನದಿಂದ ನಿಧನ ಹೊಂದಿದರು.

ಮುಕರ್ರಮ್ ಮಿರ್ಝಾ ಗುಲಾಂ ಅಹ್ಮದ್ ಸಾಹಿಬ್, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮರಿಮೊಮ್ಮಗ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಹಿರಿಯ ಮಗ ಹಝ್ರತ್ ಮಿರ್ಝಾ ಸುಲ್ತಾನ್ ಅಹ್ಮದ್ ಸಾಹಿಬರ ಮೊಮ್ಮಗ, ಹಾಗೂ ಹಝ್ರತ್ ಮಿರ್ಝಾ ಅಝೀಝ್ ಅಹ್ಮದ್ ಸಾಹಿಬರ ಪುತ್ರರಾಗಿದ್ದರು. ಹಝ್ರತ್ ಮೀರ್ ಮುಹಮ್ಮದ್ ಇಸ್‌ಹಾಖ್ ಸಾಹಿಬರ ಮಗಳ ಮಗ ಆಗಿದ್ದರು. ಅವರು ನನ್ನ ಸಹೋದರಿಯ ಪತಿಯೂ ಆಗಿದ್ದರು. ಅವರ ತಾಯಿ ಸಾಹಿಬ್‌ಝಾದಿ ನಸೀರ ಬೇಗಮ್ ಸಾಹಿಬ ಹಝ್ರತ್ ಮೀರ್ ಮುಹಮ್ಮದ್ ಇಸ್‌ಹಾಖ್ ಸಾಹಿಬ್(ರ) ರವರ ಹಿರಿಯ ಪುತ್ರಿಯಾಗಿದ್ದರು. ವಾಸ್ತವಿಕವಾಗಿ ಈ ಸಂಬಂಧಗಳು ಪ್ರಸ್ತಾಪಿಸಲು ಅರ್ಹವಾಗುವುದು ಮೃತರ ಸದ್ಗುಣಗಳ ಕಾರಣದಿಂದ. ಅವುಗಳನ್ನು ನಾನು ವಿವರಿಸುವೆನು.

ಮಿರ್ಝಾ ಗುಲಾಮ್ ಅಹ್ಮದ್ ಸಾಹಿಬ್ ಧಾರ್ಮಿಕ ಸೇವಕರಾಗಿದ್ದರು. ಝಿಂದಗಿ ವಕ್ಫ್ ಮಾಡಿದವರಾಗಿದ್ದರು. ಅವರು ಬಲಹೀನರಾಗಿದ್ದರೂ, ರೋಗಿಯಾಗಿದ್ದರೂ, ಅವರ ಹಿರಿಯಣ್ಣ ಮೃತನಾದಾಗ ನಾನು ಅವರನ್ನು ನಾಝಿರ್ ಅಅ್‌ಲಾ ಆಗಿ ನೇಮಿಸಿದಾಗ ಅವರು ತನ್ನ ಹೊಣೆಗಾರಿಕೆಗಳನ್ನು ಸಂತೋಷಕರವಾದ ರೀತಿಯಲ್ಲಿ ನಿಭಾಯಿಸಿದರು. 1962ರಲ್ಲಿ ಅವರು ತನ್ನ ಜೀವಿತವನ್ನು ವಕ್ಫ್ ಮಾಡಿದರು. ಅವರು ಲಾಹೋರಿನ ಗವರ್ನಮೆಂಟ್ ಕಾಲೇಜಿನಲ್ಲಿ ಎಂ.ಎ. ಪೊಲಿಟಿಕಲ್ ಸಯನ್ಸ್ ಕಲಿತು ತೇರ್ಗಡೆ ಹೊಂದಿದರು. ಅವರು ಅನಂತರ ಪಬ್ಲಿಕ್ ಸರ್ವಿಸ್ ಪರೀಕ್ಷೆಯಲ್ಲಿ ಜಯಶಾಲಿಯಾದರು. ಅವರು ನನ್ನೊಂದಿಗೆ ಹೀಗೆ ಹೇಳಿದರು: ನಾನು ಈ ಪರೀಕ್ಷೆಗೆ ಹಾಜರಾದದ್ದು ಜನರು ಆ ಪರೀಕ್ಷೆ ಬಗ್ಗೆ ಅದು ಬಹಳ ಕಷ್ಟಕರವೆಂದೂ ಜಯಗಳಿಸುವುದು ಅತ್ಯಂತ ಪ್ರಯಾಸಕರವೆಂದೂ ಹೇಳಿದುದರಿಂದಾಗಿದೆ. ನಾನು ಈ ಪರೀಕ್ಷೆಗೆ ಕಲಿಯಲು ಇನ್ನೊಂದು ಕಾರಣವೇನೆಂದರೆ ನಾನು ಲೌಕಿಕವಾಗಿ ಜಯಗಳಿಸಿದ ನಂತರ ಧಾರ್ಮಿಕ ಸೇವೆಗೆ ನನ್ನನ್ನು ಅರ್ಪಿಸುವ ಎಂಬ ಉದ್ದೇಶದಿಂದಾಗಿದೆ. ಯಾರಾದರೂ ನನ್ನ ಬಗ್ಗೆ, ಬೇರೆ ಎಲ್ಲಿಯೂ ನೌಕರಿ ಸಿಗದ ಕಾರಣ ಇಲ್ಲಿಗೆ ಬಂದಿದ್ದೇನೆ ಎಂದು ಹೇಳದಿರಲಿ ಎಂದು. ಅವರು ಪಬ್ಲಿಕ್ ಸರ್ವಿಸ್ ಕಮಿಶನಿನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರೂ ಸರಕಾರಿ ಕೆಲಸಕ್ಕೆ ಹೋಗಲಿಲ್ಲ. ಅವರು ತನ್ನ ಜೀವಿತವನ್ನು ಜಮಾಅತಿಗೆ ಅರ್ಪಿಸಿದರು. ನಾನು ಹೇಳಿದ ಹಾಗೆ ಅವರು 1962ರಲ್ಲಿ ಝಿಂದಿಗಿ ವಕ್ಫ್ ಮಾಡಿದರು. ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಹೇಳಿದರು: ನೀನು ಲೌಕಿಕ ವಿದ್ಯಾಭ್ಯಾಸ ಗಳಿಸಿರುವೆ. ದೀನೀ ವಿದ್ಯಾಭ್ಯಾಸ ಸಹ ಮಾಡು ಎಂದು. ಹಾಗೆ ಅವರು ಸಯ್ಯಿದ್ ಮೀರ್ ದಾವೂದ್ ಅಹ್ಮದ್ ಸಾಹಿಬರಿಂದ ಹದೀಸ್ ಮತ್ತು ಇತರ ಧಾರ್ಮಿಕ ಜ್ಞಾನ ಗಳಿಸಿದರು. 1964ರಲ್ಲಿ ನನ್ನ ಸಹೋದರಿಯನ್ನು ಅವರು ವಿವಾಹವಾದರು. ಮೌಲಾನ ಜಲಾಲುದ್ದೀನ್ ಶಮ್ಸ್ ಸಾಹಿಬರು ನಿಕಾಹ್ ಖುತ್‌ಬ ನಿರ್ವಹಿಸಿದರು. ಅವರಿಗೆ ಮೂವರು ಪುತ್ರರು ಮತ್ತು ಇಬ್ಬರು ಪುತ್ರಿಯರಿದ್ದಾರೆ. ಇಬ್ಬರು

ಪುತ್ರರು ಝಿಂದಗಿ ವಕ್ಫ್ ಮಾಡಿದ್ದಾರೆ. ಮೂರನೆಯ ಪುತ್ರ ಅಮೇರಿಕದಲ್ಲಿ ಲೌಕಿಕ ಉದ್ಯೋಗಿಯಾಗಿದ್ದರೂ ಅವರು ಜಮಾಅತಿಗೆ ಸೇವೆ ಸಲ್ಲಿಸುತ್ತಿದ್ದಾರೆ.

ಮಿರ್ಝಾ ಗುಲಾಮ್ ಅಹ್ಮದ್ ಸಾಹಿಬರು ನಿರ್ವಹಿಸಿದ ಸೇವೆಗಳು ಇವುಗಳಾಗಿವೆ: ಅವರು ನಾಝಿರ್ ತಅ್‌ಲೀಮ್ ಆಗಿದ್ದರು. ಅವರು ಎಡಿಶನಲ್ ನಾಝಿರ್ ಇಸ್ಲಾಹೋ ಇರ್ಶಾದ್ ಸಹ ಆಗಿ ಅನೇಕ ವರ್ಷ ಕೆಲಸ ಮಾಡಿದ್ದರು. 1996ರಿಂದ ಅವರು ನಾಝಿರ್ ದೀವಾನ್ ಆಗಿ ನೇಮಿಸಲ್ಪಟ್ಟಿದ್ದರು. ಅವರನ್ನು ನಾಝಿರ್ ಅಅ್‌ಲಾ ಆಗಿ ನೇಮಿಸುವ ತನಕ ಈ ಹುದ್ದೆಯಲ್ಲಿದ್ದರು. 2012ರಿಂದ 2018ರ ತನಕ ಸದರ್ ಮಜ್ಲಿಸೆ ಕಾರ್‌ಪರ್‌ದಾಝ್ ಸಹ ಆಗಿದ್ದರು. ಮಿರ್ಝಾ ಖುರ್ಷಿದ್ ಅಹ್ಮದ್ ಸಾಹಿಬರು ನಿಧನ ಹೊಂದಿದಾಗ ನಾನು ಅವರನ್ನು ನಾಝಿರ್ ಅಅ್‌ಲಾ, ಅಮೀರ್ ಮಖಾಮಿ ಮತ್ತು ಸದರ್, ಸದರ್ ಅಂಜುಮನ್ ಅಹ್ಮದಿಯಾ ಆಗಿ ನೇಮಿಸಿದೆ. ಚತುರ್ಥ ಖಿಲಾಫತ್ ಕಾಲದಲ್ಲಿ ಸಹ ಅವರನ್ನು ಖಾಯಿಮ್ ಮಖಾಮ್ ನಾಝಿರ್ ಅಅ್‌ಲಾ, ಖಾಯಿಮ್ ಮಖಾಮ್ ಅಮೀರ್ ಮಖಾಮಿ ಆಗಿ ಅನೇಕ ಸಾರಿ ನೇಮಿಸಲಾಗಿತ್ತು. ಅವರು ಮಜ್ಲಿಸೆ ವಕ್ಫೇ ಜದೀದಿನ ಸದಸ್ಯರಾಗಿದ್ದರು. 2016ರಿಂದ 2018ರ ತನಕ ಸದರ್ ಮಜ್ಲಿಸ್ ವಕ್ಫೇ ಜದೀದ್ ಆಗಿದ್ದರು.

ಅನ್‌ಸಾರುಲ್ಲಾದಲ್ಲಿ ಸಹ ವಿವಿಧ ಖಿಯಾದತ್‌ಗಳು ಅವರ ಸುಪರ್ದಿಗೆ ವಹಿಸಿ ಕೊಡಲಾಗಿದ್ದುವು. ಅವರು ನಾಯಿಬ್ ಸದರ್ ಸಫೆ ದೌಮ್ ಆಗಿದ್ದರು. ಅನಂತರ ನಾಯಿಬ್ ಸದರ್ ಸಹ ಆದರು. 2004ರಿಂದ 2009ರ ವರೆಗೆ ಸದರ್ ಅನ್ಸಾರುಲ್ಲಾಹ್ ಪಾಕಿಸ್ತಾನ್ ಆಗಿ ಕಾರ್ಯನಿರ್ವಹಿಸಿದರು. ಖುದ್ದಾಮುಲ್ ಅಹ್ಮದಿಯಾದಲ್ಲಿ ಅವರು ಮುಹ್‌ತಮಿಮ್ ಆಗಿ ಕೆಲಸ ಮಾಡಿದ್ದರು. ಅವರು ನಾಯಿಬ್ ಸದರ್ ಖುದ್ದಾಮುಲ್ ಅಹ್ಮದಿಯಾ ಮರ್‌ಕಝಿಯ ಸಹ ಆಗಿದ್ದರು. ಅನಂತರ ಸದರ್ ಖುದ್ದಾಮುಲ್ ಅಹ್ಮದಿಯಾ ಮರ್‌ಕಝಿಯ ಸಹ ಆಗಿದ್ದರು. ಅವರು ರಿವ್ಯೂ ಆಫ್ ರಿಲೀಜಿಯನ್ಸ್‌ನ ಸಂಪಾದಕರಾಗಿದ್ದರು. ಅವರು ಖಲೀಫತುಲ್ ಮಸೀಹ್ ಸಾಲಿಸರ ಪ್ರೈವೇಟ್ ಸೆಕ್ರಿಟರಿ ಸಹ ಆಗಿದ್ದರು. ಖಿಲಾಫತ್ ಲೈಬ್ರರಿ ಕಮಿಟಿಯ ಅಧ್ಯಕ್ಷರಾಗಿದ್ದರು. ಅವರು ರಬ್ವದ ಬುಯೂತುಲ್ ಹಮ್‌ದ್ ಸೊಸೈಟಿಯ ಅಧ್ಯಕ್ಷರೂ ಆಗಿದ್ದರು. ಫಝ್ಲ್ ಉಮರ್ ಫೌಂಡೇಶನಿನ ಡೈರೆಕ್ಟರ್ ಆಗಿದ್ದರು. ಜಲ್ಸಸಾಲಾನದಲ್ಲಿ ಅವರು ಅನೇಕ ವರ್ಷ ಸೇವೆ ಸಲ್ಲಿಸಿದ್ದರು. ರಬ್ವದಲ್ಲಿ ಜಲ್ಸಸಾಲಾನ ಜರಗುತ್ತಾ ಇದ್ದಾಗ ಅವರು ನಾಯಿಬ್ ಅಫ್‌ಸರ್ ಜಲ್ಸಸಾಲಾನ ಆಗಿ, ನಾಝಿಮ್ ಮೆಹ್‌ನತ್, ತಬರ್ರುಕಾತ್ ಕಮಿಟಿಯ ಸದರ್ ಆಗಿ ಕೆಲಸ ಮಾಡಿದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಬರ ರಿವಾಯಾತ್‌ಗಳನ್ನು ದಾಖಲಿಸುವ ಕಮಿಟಿಯ ಸದಸ್ಯರಾಗಿದ್ದರು. ಅವರು ಮಜ್ಲಿಸ್ ಇಫ್ತಾದ ಸದಸ್ಯರೂ ಆಗಿದ್ದರು. ತಾರೀಖೆ ಅಹ್ಮದಿಯ್ಯತ್ ಕಮಿಟಿಯ ಸದಸ್ಯರಾಗಿದ್ದರು. ಅವರು ಖಿಲಾಫತ್ ಕಮಿಟಿಯ ಸದಸ್ಯರಾಗಿದ್ದರು. ಅಶ್ರಿರ್‌ಕತುಲ್ ಇಸ್ಲಾಮಿಯಾ ಸಂಸ್ಥೆಯ ನಿಗ್ರಾನ್ ಮೇನೇಜಿಂಗ್ ಡೈರೆಕ್ಟರ್ ಸಹ ಆಗಿದ್ದರು. 1989ರಲ್ಲಿ ಅವರು ಮತ್ತು ಮಿರ್ಝಾ ಖುರ್ಷಿದ್ ಅಹ್ಮದ್ ಸಾಹಿಬರು ಹಾಗೂ ಅಂಜುಮನಿನ ಇಬ್ಬರು ಕಾರ್ಯಕರ್ತರು ಕಾಲಂ 298ಸಿ ಪ್ರಕಾರ ಬಂಧಿಸಲ್ಪಟ್ಟು ಕೆಲವು ದಿನಗಳ ಕಾಲ ಸೆರೆಮನೆ ವಾಸ ಅನುಭವಿಸಿದರು. 2010 ಮೇ ದಿನಾಂಕ 28ರಂದು ಲಾಹೋರಿನಲ್ಲಿ ನಡೆದ ದಾರುಣ ಸಂಭವದಲ್ಲಿ ಅನೇಕ ಅಹ್ಮದಿಯರು ಶಹೀದರಾದಾಗ ನಾಝಿರ್ ಅಅ್‌ಲಾರವರು ಲಾಹೋರಿಗೆ ಒಂದು ಪ್ರತಿನಿಧಿ ಸಂಘವನ್ನು ಜಮಾಅತಿಗೆ ಸಮಾಧಾನ ನೀಡಲು, ಶಹೀದರ ಕುಟುಂಬದವರನ್ನು ಕಾಣಲು, ಗಾಯಾಳುಗಳನ್ನು ಸಂದರ್ಶಿಸಲು ಕಳುಹಿಸಿದ್ದರು. ಆ ಪ್ರತಿನಿಧಿ ಸಂಘದ ಅಮೀರ್ ಮಿರ್ಝಾ ಗುಲಾಮ್ ಅಹ್ಮದ್ ಆಗಿದ್ದರು. ಶಹೀದರ ಮೃತಶರೀರಗಳನ್ನು ಆಸ್ಪತ್ರೆಗೆ ಸಾಗಿಸುವಷ್ಟರಲ್ಲಿಯೇ ಮಿರ್ಝಾ ಗುಲಾಮ್ ಸಾಹಿಬ್ ಲಾಹೋರಿಗೆ ತಲಪಿದ್ದರು. ಅಂದಾಜು ಎರಡು ವಾರ ಲಾಹೋರಿನಲ್ಲಿಯೇ ತಂಗಿದ್ದರು. ಅಲ್ಲಿ ಮಾಡಲಾದ ವ್ಯವಸ್ಥೆಯನ್ನು ಅವರೇ ಸ್ವತಃ ಮೇಲ್ವಿಚಾರಣೆ ನಡೆಸುತ್ತಿದ್ದರು. ಆಸ್ಪತ್ರೆಯಲ್ಲಿ ಗಾಯಾಳುಗಳನ್ನು ಕಾಣಲು ಹೋದಾಗ ಆ ಸಮಯದಲ್ಲಿ ಪಂಜಾಬ್ ಗವರ್ನರ್ ಸಲ್ಮಾನ್ ತಾಸೀರ್ ಸಾಹಿಬ್ ಅಲ್ಲಿಗೆ ಆಗಮಿಸಿ ಸಂತಾಪ ಸೂಚಿಸಿದ್ದರು. ಮಿರ್ಝಾ ಗುಲಾಮ್ ಅಹ್ಮದ್ ಸಾಹಿಬರು ಗವರ್ನರರ ಶ್ರದ್ಧೆ ಈ ವಿಷಯದ ಕಡೆಗೆ ಹರಿಸಿದರು: ಮಸ್‌ಜಿದ್‌ಗಳ ಮೇಲೆ ನಡೆದ ಆಕ್ರಮಣಗಳು ಅಹ್ಮದಿಯಾ ಜಮಾಅತ್ ವಿರುದ್ಧ ದ್ವೇಷವನ್ನು ಉತ್ತೇಜಿಸುವಂತಹ ಪ್ರಚಾರ ನಡೆಯುತ್ತಿರುವ ಕಾರಣದಿಂದಾಗಿದೆ. ನೀವು ಗವರ್ನರ್ ಎಂಬ ನೆಲೆಯಲ್ಲಿ ಈ ವಿಷಯದ ಕಡೆಗೆ ಗಮನ ಹರಿಸುವುದು ನಿಮ್ಮ ಹೊಣೆಗಾರಿಕೆಯಾಗಿದೆ ಎಂದು ತಿಳಿಸಿದ್ದರು. ಅಲ್ಪಸಂಖ್ಯಾತ ವಿಭಾಗದ ಪ್ರಾಂತ್ಯ ಸಚಿವ ಜಾವೇದ್ ಮೈಕಲ್ ಸಾಹಿಬ್ ಸಹ ಸಂತಾಪ ಸೂಚಿಸಲು ಆಗಮಿಸಿದ್ದರು. ಅವರೊಂದಿಗೆ ಮಿರ್ಝಾ ಗುಲಾಮ್ ಅಹ್ಮದ್ ಸಾಹಿಬರು ಬಹಳ ಧೈರ್ಯದಿಂದ ಹೇಳಿದರು: ನೀವು ಸಂತಾಪ ಸೂಚಿಸಲು ಆಗಮಿಸಿರುವುದಕ್ಕಾಗಿ ನಾವು ನಿಮಗೆ ಕೃತಜ್ಞರಾಗಿದ್ದೇವೆ. ಆದರೆ ನಾವು ಒಂದು ವಿಷಯವನ್ನು ಸ್ಪಷ್ಟವಾಗಿ ಹೇಳಲು ಬಯಸುತ್ತೇವೆ. ನಾವು ಅಲ್ಪಸಂಖ್ಯಾತರೆಂದು ಖಂಡಿತವಾಗಿಯೂ ಒಪ್ಪಿಕೊಳ್ಳುವುದಿಲ್ಲ. ನಾವು ಮುಸ್ಲಿಮರಾಗಿದ್ದೇವೆ. ನೀವು ಸಚಿವ ಸಂಪುಟದಲ್ಲಿ ಧ್ವನಿಯೆತ್ತಬೇಕು. ಅಹ್ಮದಿಯಾ ಜಮಾಅತಿನ ವಿರುದ್ಧ ನಡೆಯುವ ಕೃತ್ಯಗಳನ್ನು ಸರಕಾರ ಕೊನೆಗೊಳಿಸಬೇಕು ಎಂದು ಹೇಳಿದರು. ಮೇ ದಿನಾಂಕ 29 ಮತ್ತು 30ರಂದು ಪ್ರೆಸ್ ಕಾನ್‌ಫರೆನ್ಸ್ ಸಹ ನಡೆಸಿದರು. ಸ್ವಿಸ್ ನೇಶನಲ್ ಟಿ.ವಿ., ಬಿ.ಬಿ.ಸಿ., ವಾಯ್ಸ್ ಆಫ್ ಅಮೇರಿಕ, ಸಹಾರಾ ಟಿ.ವಿ., ಚ್ಯಾನಲ್ ಫೈವ್, ದುನ್ಯಾ ಟಿ.ವಿ. ಮೊದಲಾದವುಗಳಿಗೆ ಸಂದರ್ಶನ ನೀಡಿದರು. ಅವರು ಅವರೆಲ್ಲರೊಂದಿಗೆ ಸ್ಪಷ್ಟವಾಗಿ ಹೇಳಿದ್ದರು: ನಾವು ಮುಸ್ಲಿಮರಾಗಿದ್ದೇವೆ. ನಾವು ಮುಸ್ಲಿಮರಾಗಿರುವುದನ್ನು ನಮ್ಮಿಂದ ಯಾರೂ ಕಿತ್ತುಕೊಳ್ಳಲು ಸಾಧ್ಯವಿಲ್ಲ.

ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ರಹಿಮಹುಲ್ಲಾಹು ತಆಲಾ ತನ್ನ ಒಂದು ಖುತ್‌ಬದಲ್ಲಿ ತಾನು ಕಂಡ ಒಂದು ಸ್ವಪ್ನವನ್ನು ವಿವರಿಸಿದರು. ಅವರು ಹೇಳಿದರು: ನಾನು ನನ್ನ ಚಟುವಟಿಕೆಗಳನ್ನು ವರ್ಧಿಸಬೇಕೆಂದು ಯೋಚಿಸುತ್ತಿದ್ದೆ. ನಾನು ರಾತ್ರಿ ಸ್ವಪ್ನದಲ್ಲಿ ಮಿಯಾಂ

ಅಹ್ಮದ್‌ರನ್ನು ಕಂಡೆನು. ಅವರು ಯಾವಾಗಲೂ ಬಹಳ ಉತ್ತಮವಾದ ಸಲಹೆ ನೀಡುತ್ತಿದ್ದರು: ಪವಿತ್ರ ಖುರ್‌ಆನಿನ ತಫ್‌ಸೀರ್ ಸಗೀರ್‌ಗೆ ಹೆಚ್ಚುವರಿ ಟಿಪ್ಪಣಿ ಬರೆಯುವುದಕ್ಕೆ ಬದಲಾಗಿ ನಾನೇ ಹೊಸ ಭಾಷಾಂತರ ಮಾಡಬೇಕೆಂದು ಅವರು ಸಲಹೆ ನೀಡಿದರು. ಅಲ್‌ಹಮ್‌ದುಲಿಲ್ಲಾಹ್– ಹೊಸ ಭಾಷಾಂತರ ಮಾಡುವ ಭಾಗ್ಯ ನನಗೆ ಅಲ್ಲಾಹನು ದಯಪಾಲಿಸಿದನು. ಅನೇಕ ಸಮಸ್ಯೆಗಳು ಆ ಮೂಲಕ ಪರಿಹಾರವಾದವು. ನಾನು ಕಂಡದ್ದು ದೀರ್ಘವಾದ ಸ್ವಪ್ನವಾಗಿದೆ. ಅದರಲ್ಲಿ ಮಿಯಾಂ ಅಹ್ಮದರ ಇನ್ನಿತರ ಸಲಹೆಗಳೂ ಇವೆ ಎಂದು ವಿವರಿಸಿದ್ದರು.

ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ರಹಿಮಹುಲ್ಲಾಹು ತಆಲಾ ಅವರಿಗೆ ಬರೆದ ಒಂದು ಪತ್ರದಲ್ಲಿ ಹೀಗೆ ಬರೆದರು: ಅಝೀಝುಮ್ ಅಹ್ಮದ್ ಸಲ್ಲಮಹುಲ್ಲಾಹು, ಅಸ್ಸಲಾಮು ಅಲೈಕುಮ್. ನೀವು ನಿಮ್ಮ ಆತಂಕದ ಬಗ್ಗೆ ಬರೆದ ಪತ್ರ ತಲಪಿದೆ. ನಾನು ತಮಗೋಸ್ಕರ ವಿನಯಾನ್ವಿತನಾಗಿ ಪ್ರಾರ್ಥಿಸುತ್ತಿದ್ದೇನೆ. ಅಲ್ಲಾಹನು ತಮ್ಮ ಪ್ರಕೃತಿಯಲ್ಲಿ ಸತ್ಯಸಂಧತೆ ಮತ್ತು ಸಾತ್ವಿಕತೆಯನ್ನು ಇರಿಸಿದ್ದಾನೆ. ಈ ಎರಡು ಗುಣಗಳನ್ನು ಹೊಂದಿದ ಮನುಷ್ಯನನ್ನು ಅಲ್ಲಾಹನು ಎಂದೂ ನಾಶಗೊಳಿಸಲಾರನು. ಅಲ್ಲಾಹನು ತಮಗೆ ಹೆಚ್ಚು ಹೆಚ್ಚಾಗಿ ಆಧ್ಯಾತ್ಮಿಕ ಅಭಿವೃದ್ಧಿಯನ್ನು ದಯಪಾಲಿಸುತ್ತಾ ಇರಲಿ. ನಿಮಗೆ ಮನಶ್ಶಾಂತಿ ಎಂಬ ಸ್ವರ್ಗವನ್ನು ದಯಪಾಲಿಸಲಿ.

ಮಿರ್ಝಾ ಗುಲಾಮ್ ಅಹ್ಮದ್ ಸಾಹಿಬರ ಪತ್ನಿ ಅಮತುಲ್ ಖುದ್ದೂಸ್ ಸಾಹಿಬ ಹೇಳುತ್ತಾರೆ: ಹಝ್ರತ್ ಖಲೀಫತುಲ್ ಮಸೀಹ್ ಸಾನಿ ರಝಿಯಲ್ಲಾಹು ಅನ್‌ಹು ರೋಗಬಾಧಿತರಾಗಿದ್ದಾಗ ಪ್ರತಿದಿನ ರಾತ್ರಿ ಅವರ ನಿವಾಸಕ್ಕೆ ಹೋಗಿ ಕಾರ್ಯನಿರತರಾಗುತ್ತಿದ್ದರು. ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್ ರಹಿಮಹುಲ್ಲಾಹು ತಆಲಾ ರವರ ಕಾಲದಲ್ಲಿ ಸಹ ಅವರು ಖಿಲಾಫತ್‌ನೊಂದಿಗೆ ನಿಕಟ ಸಂಬಂಧ ಹೊಂದಿದ್ದರು. ಹಝ್ರತ್ ಖಲೀಫತುಲ್ ಮಸೀಹ್ ಅವರ ಬಗ್ಗೆ ಬಹಳ ನಂಬಿಕೆ ಹೊಂದಿದ್ದರು. 1974ರಲ್ಲಿ ಅನೇಕ ಹಗಲು ರಾತ್ರಿಗಳಲ್ಲಿ ಅವರು ಅಲ್ಲಿಯೇ ತಂಗಿದ್ದರು. ಅಲ್ಲಿ ಅವರ ಜೊತೆ ಮಿರ್ಝಾ ಖುರ್ಷಿದ್ ಅಹ್ಮದ್ ಸಾಹಿಬರೂ ಇದ್ದರು. ಅವರಿಬ್ಬರಿಗೂ ಮನೆಗೆ ಹೋಗಲು ಅನುಮತಿ ಇರಲಿಲ್ಲ.

ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್[ರ] ಅವರಿಗೆ ಒಂದು ಪ್ರಶಸ್ತಿ ನೀಡಿದ್ದರು. ಒಂದು ಇಜ್ತಿಮಾ ಸಂದರ್ಭದಲ್ಲಿ ಅವರು ಹಝ್ರತ್ ಖಲೀಫತುಲ್ ಮಸೀಹ್‌ರೊಂದಿಗೆ ಅಪೇಕ್ಷಿಸಿದ್ದರು, ತಾವು ಪ್ರತಿಜ್ಞೆಯನ್ನು ಹೇಳಿಕೊಡಿರಿ ಎಂದು. ಆಗ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್ ರಹಿಮಹುಲ್ಲಾಹು ತಆಲಾ ಹೇಳಿದರು ನೀವೇ ಪ್ರತಿಜ್ಞೆ ಹೇಳಿಕೊಡಿರಿ. ಅನಂತರ ಆಜ್ಞೆ ರೂಪದಲ್ಲಿ ಹೇಳಿ ಅವರೇ ಪ್ರತಿಜ್ಞೆ ಹೇಳಿಕೊಡುವಂತೆ ಮಾಡಿ, ಹುಝೂರರು ಇತರ ಖುದ್ದಾಮ್‌ರೊಂದಿಗೆ ನಿಂತು ಪ್ರತಿಜ್ಞೆ ಪುನರಾವರ್ತಿಸಿದರು. ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ರಹಿಮಹುಲ್ಲಾಹು ತಆಲಾ ಹೇಳಿದ್ದರು: ಈ ಅಹ್ಮದ್ ಮತ್ತು ಖುರ್ಷಿದ್ ಇವರಿಬ್ಬರೂ ನನಗೆ ನಿಷ್ಠಾವಂತರಾಗಿರುವವರಲ್ಲಿ ಸೇರಿದವರಾಗಿದ್ದಾರೆ. ಪ್ರತಿಯೊಂದು ಖಿಲಾಫತ್‌ಗೆ ನಿಷ್ಠಾವಂತರಾದವರೊಂದಿಗೆ ಸೇರಿದವರಾಗಿದ್ದಾರೆ.

ಅವರ ಪತ್ನಿ ಹೇಳುತ್ತಾರೆ: ರಾತ್ರಿ ಹೊತ್ತು ನಫ್ಲ್ ನಮಾಝ್ ನಿರ್ವಹಿಸುವಾಗ ಎಷ್ಟು ಅತ್ತು ಪ್ರಾರ್ಥಿಸುತ್ತಿದ್ದರೆಂದರೆ ಮನೆ ಪ್ರತಿಧ್ವನಿಸುತ್ತಿತ್ತು. ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೋಸ್ಕರ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೋಸ್ಕರ, ಕಾಲದ ಖಲೀಫರಿಗೋಸ್ಕರ, ಜಮಾಅತಿಗೋಸ್ಕರ, ತಂದೆ ತಾಯಿಗಳಿಗೋಸ್ಕರ, ಸಹೋದರ ಸಹೋದರಿಯರಿಗೋಸ್ಕರ, ಪತ್ನಿ ಮತ್ತು ಮಕ್ಕಳಿಗೋಸ್ಕರ, ಸಂಬಂಧಿಕರಿಗೋಸ್ಕರ ಪ್ರಾರ್ಥಿಸುತ್ತಿದ್ದರು. ಅವರು ಸೂರತುಲ್ ಫಾತಿಹದ ಕೆಲವು ವಚನಗಳನ್ನು ನಮಾಝ್‌ಗಳಲ್ಲಿ ಮತ್ತೆ ಮತ್ತೆ ಪುನರಾವರ್ತಿಸುತ್ತಿದ್ದರು. ಅವರಿಗೆ ಯಾರಾದರೂ ಅತ್ಯಂತ ಚಿಕ್ಕ ಪಾರಿತೋಷಕ ನೀಡಿದರೂ ಅವರ ಬಗ್ಗೆ ಕೃತಜ್ಞತೆ ಸೂಚಿಸುತ್ತಿದ್ದರು. ಅವರು ಅದನ್ನು ಪಾರಿತೋಷಕವಾಗಿ ಮರಳಿಸುತ್ತಿದ್ದರು ಅಥವಾ ಮನೆಗೆ ಹೋಗಿ ಕೃತಜ್ಞತೆ ಸೂಚಿಸುತ್ತಿದ್ದರು. ಅಥವಾ ಪತ್ರ ಬರೆದು ಕೃತಜ್ಞತೆ ಸೂಚಿಸುತ್ತಿದ್ದರು. ಅವರಿಗೆ ಯಾವುದೇ ಕೆಲಸ ವಹಿಸಿಕೊಟ್ಟರೂ ಅದನ್ನು ಈಡೇರಿಸುವ ತನಕ ಸಮಾಧಾನದಿಂದ ಇರುತ್ತಿರಲಿಲ್ಲ. ಅವರಿಗೆ ಅಪಾರ ಜ್ಞಾನವಿತ್ತು. ಅವರ ಸ್ಮರಣೆ ಶಕ್ತಿ ಬಹಳ ಚೆನ್ನಾಗಿತ್ತು. ಯಾವುದಾದರೂ ವರದಿ ಬಗ್ಗೆ ಅಥವಾ ಹಳೆಯ ಸಂಬಂಧದ ಬಗ್ಗೆ ಅವರೊಂದಿಗೆ ವಿಚಾರಿಸಿದರೆ ಅವರಿಗೆ ಅವುಗಳ ಬಗ್ಗೆ ನೆನಪಿರುತ್ತಿತ್ತು. ಅವರಿಗೆ ಆದಾಯ ಲಭಿಸಿದ ಕೂಡಲೆ ಮೊತ್ತಮೊದಲು ಚಂದ ಪಾವತಿಸಿ ಅನಂತರ ಅದನ್ನು ಖರ್ಚು ಮಾಡುತ್ತಿದ್ದರು.

ಪತ್ರ ಬರೆದ ಅನೇಕರು ನನಗೆ ಬರೆದಿದ್ದಾರೆ ಮತ್ತು ನಾನು ಸಹ ನೋಡುತ್ತಾ ಇದ್ದೆ ಪ್ರತಿಯೊಂದು ವಿಷಮ ಪರಿಸ್ಥಿತಿಯಲ್ಲಿ ಬಹಳ ಧೈರ್ಯದಿಂದಲೂ ಬಹಳ ವಿವೇಕಭರಿತವಾಗಿಯೂ ಕೆಲಸ ಮಾಡುತ್ತಿದ್ದರು. ಅವರು ಖಿಲಾಫತ್‌ಗೆ ನಿಷ್ಠಾವಂತರಾಗಿದ್ದರು. ಜಲ್ಸದ ಸಂದರ್ಭದಲ್ಲಿ ಇಲ್ಲಿಗೆ ಆಗಮಿಸಿದಾಗ ಅವರು ಬಹಳ ಬಲಹೀನರಾಗಿದ್ದರು. ನಾನು ಅವರೊಂದಿಗೆ ಹೇಳಿದೆ ನಡೆಯುವಾಗ ಬೆತ್ತ ಹಿಡಿದುಕೊಳ್ಳಿರಿ ಎಂದು. ಅವರು ಕೂಡಲೆ ಬೆತ್ತ ಹಿಡಿದುಕೊಳ್ಳಲು ಪ್ರಾರಂಭಿಸಿದರು. ಅವರು ಹೇಳಿದರು, ಈಗ ಖಲೀಫರ ಆಜ್ಞೆ ದೊರೆತ ಕಾರಣ ಬೆತ್ತವನ್ನು ಬಳಸಲೇಬೇಕಾಗಿದೆ. ಕೆಲವು ವರ್ಷಗಳ ಹಿಂದೆ ನಾನು ಹೇಳಿದ್ದೆ, ನಾಝಿರ್‌ಗಳು ಜಮಾಅತ್‌ಗಳನ್ನು ಸಂದರ್ಶಿಸಿ ಪ್ರತಿಯೊಂದು ಮನೆಗೆ ಹೋಗಿ ನನ್ನ ಸಲಾಮ್ ತಲಪಿಸಬೇಕೆಂದು. ಅವರಿಗೆ ಸಿಂಧ್ ಪ್ರಾಂತ್ಯದ ಜವಾಬ್ದಾರಿ ನೀಡಲಾಗಿತ್ತು. ಅವರ ಪತ್ನಿ ಹೇಳುತ್ತಾರೆ: ಅವರು ಸಿಂಧ್‌ನಿಂದ ಮರಳಿ ಬಂದಾಗ ಕುಂಟುತ್ತಾ ನಡೆಯುತ್ತಿದ್ದರು. ನಾನು ವಿಚಾರಿಸಿದಾಗ ಹೇಳಿದರು, ಒಂದು ಮನೆಯ ಏಣಿಯಿಂದ ಬಿದ್ದುಬಿಟ್ಟೆನು ಎಂದು. ಅವರನ್ನು ಫಝ್ಲೆ ಉಮರ್ ಆಸ್ಪತ್ರೆಯಲ್ಲಿ ಪರೀಕ್ಷಿಸಿದಾಗ ಅವರ ಪಾದದ ಕಿರುಬೆರಳಿನ ಎಲುಬಿನಲ್ಲಿ ಬಿರುಕು ಇತ್ತು. ಇನ್ನೊಂದು ಕಾಲಿನ ಮೊಣಕಾಲಿನಲ್ಲಿ ಸ್ವಲ್ಪ ಫ್ರಾಕ್ಚರ್ ಇತ್ತು. ಪತ್ನಿ

ಹೇಳುತ್ತಾರೆ, ನಾನು ಅವರೊಂದಿಗೆ ಕೇಳಿದೆ ನಿಮಗೆ ನೋವಾಗುತ್ತಾ ಇರಲಿಲ್ಲವೇ? ಅವರು ಹೇಳಿದರು: ನೋವು ಇತ್ತು ಆದರೆ ಖಲೀಫರ ಸಂದೇಶ ಮನೆ ಮನೆಗಳಿಗೆ ತಲಪಿಸಬೇಕಾಗಿದ್ದ ಕಾರಣ ಹನ್ನೊಂದು ದಿನಗಳ ಕಾಲ ನಾನು ಈ ನೋವಿನ ಬಗ್ಗೆ ಲಕ್ಷಿಸದೆ ನನ್ನ ಕೆಲಸ ಮುಗಿಸಿ ಬಂದೆನು.

ಅವರ ಪುತ್ರ ಬರೆಯುತ್ತಾರೆ: ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್‌ರವರು ಹಿಜ್‌ರತ್ ಮಾಡಿದ ನಂತರ ಅವರ ಖುತ್‌ಬಗಳ ಕ್ಯಾಸೆಟ್ ಮೊತ್ತಮೊದಲು ಅವರ ಬಳಿಗೆ ಬರುತ್ತಿತ್ತು. ಅವರು ಎಲ್ಲಾ ಜನರನ್ನು ಜಮಾಯಿಸಿ ಹುಝೂರರ ಖುತ್‌ಬ ಆಲಿಸುವ ವ್ಯವಸ್ಥೆ ಮಾಡುತ್ತಾ ಇದ್ದರು. ನಂತರ ಎಂ.ಟಿ.ಎ. ಪ್ರಾರಂಭವಾದಾಗ ಸಹ ಖುತ್‌ಬವನ್ನು ಜನರು ಆಲಿಸುವಂತೆ ಮಾಡಲು ವಿಶಿಷ್ಟವಾಗಿ ವ್ಯವಸ್ಥೆ ಮಾಡುತ್ತಿದ್ದರು. ಪ್ರತಿಯೊಂದು ಮನೆಯ ಜನರು ಖುತ್‌ಬಗಳನ್ನು ಆಲಿಸುವಂತೆ ವ್ಯವಸ್ಥೆ ಮಾಡಿದ್ದರು. ಮನೆಯಲ್ಲಿ ಕೆಲಸ ಮಾಡುವ ವ್ಯಕ್ತಿಗಳು ಮತ್ತು ಹೊರಗೆ ನೌಕರಿ ಮಾಡುವವರು ಖುತ್‌ಬ ಆಲಿಸುವಂತೆ ವಿಶಿಷ್ಟ ವ್ಯವಸ್ಥೆ ರೂಪಿಸಿದ್ದರು.

ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ರಹಿಮಹುಲ್ಲಾಹು ತಆಲಾ ಹಿಜ್‌ರತ್ ಮಾಡುವ ಕಾಲದಲ್ಲಿ ಮಿರ್ಝಾ ಗುಲಾಮ್ ಅಹ್ಮದ್ ಸಾಹಿಬರ ತಾಯಿ ಸಾಹಿಬ್‌ಝಾದಿ ಸಯ್ಯಿದ ನಸೀರ ಬೇಗಮ್ ಸಾಹಿಬ ಬಹಳ ರೋಗಪೀಡಿತರಾಗಿದ್ದರು. ಯಾವ ರಾತ್ರಿ ಹಿಜ್‌ರತ್ ಮಾಡಲಾಗಿತ್ತೋ ಆ ರಾತ್ರಿ ಅವರ ತಾಯಿಯ ಕೊನೆಯ ರಾತ್ರಿ ಎಂಬಂತೆ ತೋರುತ್ತಿತ್ತು. ಆದರೆ ಅವರು ಜಮಾಅತಿನ ವಿಷಯಗಳ ಬಗ್ಗೆ ಕಾರ್ಯನಿರತರಾಗಿದ್ದರು. ಆದುದರಿಂದ ತಾಯಿ ಮಲಗಿದ್ದ ಕೋಣೆಗೆ ಸಹ ಹೋಗಿರಲಿಲ್ಲ. ಜಮಾಅತಿನ ಕಾರ್ಯದಲ್ಲಿ ಮಗ್ನರಾಗಿದ್ದರು. ಅವರಿಗೆ ನನ್ನೊಂದಿಗೆ ಸಹ ಯಾವಾಗಲೂ ವಿಧೇಯತೆ ಮತ್ತು ನಿಷ್ಠೆಯ ಸಂಬಂಧವಿತ್ತು. ಮಿರ್ಝಾ ಅನಸ್ ಅಹ್ಮದ್ ಸಾಹಿಬ್ ಹೇಳುತ್ತಾರೆ: ಅವರು ಕ್ಷಮೆ ನೀಡುವುದರಲ್ಲಿ ಮೊದಲಿಗರಾಗುತ್ತಿದ್ದರು. ಅವರು ನಮಾಝುನ್ನು ಎಷ್ಟು ಅಳಲು ಭರಿತರಾಗಿ ನಿರ್ವಹಿಸುತ್ತಿದ್ದರೆಂದರೆ ನನಗೆ ಅಸೂಯೆಯಾಗುತ್ತಿತ್ತು. ಅವರು ಅತ್ಯಂತ ಬುದ್ಧಿಶಾಲಿಯೂ ಹೊಣೆಗಾರಿಕೆ ವಹಿಸುವವರೂ ಆಗಿದ್ದರು. ಐದು ಹೊತ್ತು ನಮಾಝ್‌ಗೋಸ್ಕರ ಮಸ್‌ಜಿದ್‌ಗೆ ಹೋಗುತ್ತಿದ್ದರು. ಬಡವರಿಗೆ ಸಹಾಯ ಮಾಡುವವರೂ ತನ್ನ ಶಕ್ತಿಗಳನ್ನು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವ ಭಾಗ್ಯ ಗಳಿಸಿದವರೂ ಆಗಿದ್ದರು.

ಚೌಧರಿ ಹಮೀದುಲ್ಲಾ ಸಾಹಿಬ್ ಹೇಳುತ್ತಾರೆ: ಅವರು ಎಲ್ಲಾ ವಿಷಯಗಳ ಬಗ್ಗೆ ಚೆನ್ನಾಗಿ ತಿಳುವಳಿಕೆಯುಳ್ಳವರೂ ಉತ್ತಮ ಸಲಹೆ ನೀಡುವವರೂ ಆಗಿದ್ದರು. ಅವರ ಅಭಿಪ್ರಾಯಗಳು ನಿರ್ಧಾರಕವಾಗಿದ್ದುವು. ಜಮಾಅತಿನ ಸಾಹಿತ್ಯ ಮತ್ತು ಚರಿತ್ರೆ ಬಗ್ಗೆ ಗಾಢವಾದ ಜ್ಞಾನ ಅವರಿಗೆ ಇತ್ತು. ಅವರು ಸ್ವತಃ ನೋಡಿಕೊಂಡು ಕೆಲಸವನ್ನು ಮಾಡಿಸುವವರಾಗಿದ್ದರು. ಅವರು ಅನಾಥರ ಬಗ್ಗೆ ಮತ್ತು ವಿಧವೆಯರ ಬಗ್ಗೆ ಶ್ರದ್ಧೆ ಹರಿಸುವವರಾಗಿದ್ದರು. ಅವರು ಮೃದುವಾಗಿಯೂ ಪ್ರೀತಿಯಿಂದಲೂ ಕೆಲಸ ಮಾಡಿಸುವವರಾಗಿದ್ದರು. ದುಃಖಿತರೂ ಕಷ್ಟಪಡುವವರೂ ಆವಶ್ಯಕತೆಯುಳ್ಳವರೂ ಆಗಿರುವ ಜನರಿಗೆ ಸಾಧ್ಯವಿರುವ ಮಟ್ಟಿಗೆ ಅನುಕಂಪದೋರಿ ಅವರ ಕಷ್ಟಗಳನ್ನು ದೂರಸರಿಸುವವರಾಗಿದ್ದರು. ಅವರಿಗೆ ಅಲ್ಲಾಹನು ಎಂತಹ ಸಾಮರ್ಥ್ಯ ನೀಡಿದ್ದನೆಂದರೆ ಅವರು ತಕ್ಷಣ ವಿಷಯದ ತಳದ ತನಕ ತಲಪುತ್ತಿದ್ದರು ಮತ್ತು ಕೂಡಲೆ ಕಾರ್ಯನಿರ್ವಹಿಸುವವರಾಗಿದ್ದರು.

ಅವರಿಗೆ ಖಿಲಾಫತ್‌ನೊಂದಿಗೆ ಬಹಳ ದೃಢವಾದ ಸಂಬಂಧವಿತ್ತು. ಒಮ್ಮೆ ಒಂದು ಇಫ್ತಾ ಕಮಿಟಿಯಲ್ಲಿ ಝಕಾತ್ ಬಗ್ಗೆ ಚರ್ಚೆ ನಡೆದು ಆ ಕಮಿಟಿಯವರು ಒಂದು ವರದಿ ತಯಾರಿಸಿ ನನಗೆ ಕಳುಹಿಸಿದಾಗ ನಾನು ಅದನ್ನು ಅಂಗೀಕರಿಸದೆ ಹೇಳಿದೆ ಆ ವಿಷಯದ ಬಗ್ಗೆ ಪುನಃ ಪರಿಶೋಧಿಸಿರಿ ಎಂದು. ಅನೇಕ ಕಮಿಟಿಗಳು ರೂಪಿಸಲ್ಪಟ್ಟವು. ದೀರ್ಘ ಚರ್ಚೆಗಳು ನಡೆದವು. ವಿದ್ವಾಂಸರು ಯಾವುದೇ ನಿರ್ಧಾರಕ್ಕೆ ಬರಲಿಲ್ಲ. ಕೊನೆಗೆ ಸದರ್ ಸಾಹಿಬರು ಮಿರ್ಝಾ ಗುಲಾಮ್ ಅಹ್ಮದ್ ಸಾಹಿಬರನ್ನು ಇಫ್ತಾ ಕಮಿಟಿಯ ಅಧ್ಯಕ್ಷರನ್ನಾಗಿ ಮಾಡಿದರು. ಆ ಕಮಿಟಿಯಲ್ಲಿ ಸಹ ವಿದ್ವಾಂಸರು ನನ್ನ ತೀರ್ಪಿಗೆ ವಿರುದ್ಧವಾಗಿ ವಾದಿಸಲು ಸಿದ್ಧತೆ ಮಾಡಿ ಆಗಮಿಸಿದ್ದರು. ಅಧ್ಯಕ್ಷರು ಆ ವಿದ್ವಾಂಸರ ವಾದಗಳನ್ನು ಆಲಿಸಿದರು. ಅದರ ಬಗ್ಗೆ ಮುಬಶ್ಶಿರ್ ಅಯಾಝ್ ಸಾಹಿಬ್ ಹೇಳುತ್ತಾರೆ: ಆಗ ಮಿರ್ಝಾ ಗುಲಾಮ್ ಅಹ್ಮದ್ ಸಾಹಿಬರು ಬಹಳ ಆವೇಶಭರಿತರಾಗಿ ಹೇಳಿದರು: ಖಲೀಫರು ಒಂದು ತೀರ್ಪು ನೀಡಿರುವಾಗ ಅದಕ್ಕೆ ವಿರುದ್ಧವಾಗಿ ವರ್ತಿಸಬಹುದೆಂದು ನಾವು ಯೋಚಿಸಲು ಹೇಗೆ ತಾನೆ ಸಾಧ್ಯ? ಹೀಗೆ ಹೇಳಿ ಅವರು ವಿದ್ವಾಂಸರ ಎಲ್ಲಾ ಸಾಕ್ಷ್ಯಾಧಾರಗಳನ್ನು ತಿರಸ್ಕರಿಸಿದರು. ಯಾವ ದೊಡ್ಡ ವಿದ್ವಾಂಸ ಏನು ಹೇಳುತ್ತಿದ್ದಾರೆ ಎಂಬುದನ್ನು ಅವರು ಪರಿಗಣಿಸಲಿಲ್ಲ.

ಅವರು ಅಹ್ಮದಿಯ್ಯತ್ತಿನ ಚರಿತ್ರೆ ಮತ್ತು ಜಮಾಅತಿಗೆ ಸಂಬಂಧಿಸಿದ ಘಟನೆಗಳ ಮತ್ತು ವರದಿಗಳ ಎನ್‌ಸೈಕ್ಲೋಪೀಡಿಯಾ ಆಗಿದ್ದರೆಂದು ಹೇಳಲಾಗುತ್ತದೆ. ನಾಯಿಬ್ ನಾಝಿರ್ ತಅ್‌ಲೀಮ್ ಬರೆಯುತ್ತಾರೆ: ಕೆಲವು ಪರಿಸ್ಥಿತಿಗಳ ಕಾರಣದಿಂದ ಒಬ್ಬ ವಿದ್ಯಾರ್ಥಿಗೆ ಸಹಾಯಧನ ಖಲೀಫರಿಂದ ಅಂಗೀಕಾರ ಲಭಿಸದೆ ಹೋದರೆ ಅಂತಹ ಸಂದರ್ಭದಲ್ಲಿ ಮಿರ್ಝಾ ಗುಲಾಮ್ ಅಹ್ಮದ್ ಸಾಹಿಬರು ಹೇಳುತ್ತಿದ್ದರು, ಮಂಜೂರಾತಿ ದೊರಕಿದ ಮತ್ತು ಸಂತೋಷದ ಸಮಾಚಾರಗಳನ್ನು ಖಲೀಫರಿಗೆ ಅನ್ವಯಿಸಿ ತಿಳಿಸಬೇಕು. ಮಂಜೂರಾತಿ ಪಡೆಯದ ಮತ್ತು ಸಂತೋಷಕರವಲ್ಲದ ವಾರ್ತೆಗಳನ್ನು ನಮ್ಮ ನಝಾರತ್‌ಗೆ ಅನ್ವಯವಾಗುವಂತೆ ತಿಳಿಸಬೇಕು.

ವಝಾರತೆ ದೀವಾನ್‌ನಿಂದ ಅವರನ್ನು ವರ್ಗಾಯಿಸಿ ಅವರನ್ನು ನಾಝಿರ್ ಅಅ್‌ಲಾ ಆಗಿ ನೇಮಿಸಿದಾಗ ಅವರ ಒಬ್ಬ ಕ್ಲಾರ್ಕ್ ಬರೆಯುತ್ತಾರೆ: ಅವರು ಹೊಸ ಕಚೇರಿಗೆ ಹೋಗುವ ಮೊದಲು ನಮ್ಮನ್ನು ಕಾಣಲು ಬಂದು ಹೇಳಿದರು, ನಾನು ನಿಮ್ಮಿಂದ ವಿದಾಯಕೋರಲು ಆಗಮಿಸಿದ್ದೇನೆ. ಅವರ ಮಾತು ಕೇಳಿ ನಾವು ಹೃದಯ ತುಂಬಿದವರಾದೆವು. ನಾವು ಹೇಳಿದೆವು ಮಿಯಾಂ ಸಾಹಿಬ್, ನೀವು ಇಲ್ಲೇ ಇರಿ ಅಥವಾ ನಮ್ಮನ್ನು ಜೊತೆಗೆ ಕರೆದುಕೊಂಡು ಹೋಗಿರಿ. ಆಗ ಅವರು ಮುಗುಳು ನಗುತ್ತಾ ಹೇಳಿದರು: ನಾನು ಖಲೀಫತುಲ್

ಮಸೀಹರ ಆದೇಶ ಪ್ರಕಾರ ಇಲ್ಲಿಂದ ಹೋಗುತ್ತಿದ್ದೇನೆ. ಅನಂತರ ಅವರು ತನ್ನ ಪ್ರಭುವಾದ ಅಲ್ಲಾಹನ ಆಜ್ಞೆ ಪ್ರಕಾರ ಅವನ ಬಳಿಗೆ ಹೋದರು. ಅವರು ಎಂತಹ ಸ್ಥಳಕ್ಕೆ ಹೋಗಿರುವರೆಂದರೆ ಅಲ್ಲಿಗೆ ಪ್ರತಿಯೊಬ್ಬನು ತನ್ನ ಸರದಿ ಪ್ರಕಾರ ಹೋಗಲಿಕ್ಕಿದೆ. ಆದರೆ ಅಲ್ಲಾಹನ ಸಂಪ್ರೀತಿ ಗಳಿಸಲಿಕ್ಕಾಗಿ ಜೀವಿಸಲು ಪ್ರಯತ್ನಿಸುವವರು ಭಾಗ್ಯಶಾಲಿಗಳಾಗಿದ್ದಾರೆ.

ಅಲ್ಲಾಹನು ಅವರ ಪದವಿಗಳನ್ನು ಉನ್ನತಗೊಳಿಸಲಿ. ಅವರ ಒಳಿತುಗಳನ್ನು ಮುಂದುವರಿಸಲು ಅವರ ಮಕ್ಕಳಿಗೆ ಅಲ್ಲಾಹನು ಅನುಗ್ರಹಿಸಲಿ. ಅವರ ಒಳಿತುಗಳನ್ನು ನೆಲೆಗೊಳಿಸಲು ಮತ್ತು ಮಾಡಲು ಅವರಿಗೆ ಭಾಗ್ಯ ಲಭಿಸಲಿ. ಅವರು ಎಷ್ಟು ನಿಷ್ಠೆಯಿಂದ ತನ್ನ ವಕ್‌ಫನ್ನು ನಿಭಾಯಿಸಿದರೋ ಅದೇ ರೀತಿ ಜೀವಿತ ವಕ್‌ಫ್ ಮಾಡಿದ ಎಲ್ಲರೂ ಮತ್ತು ಹುದ್ದೇದಾರರು ಸಹ ಅವರ ಹಾಗೆ ನಿಷ್ಠಾವಂತರಾಗಲು ಮತ್ತು ವಹಿಸಿಕೊಟ್ಟ ಕೆಲಸವನ್ನು ಮಾಡಲು ಅವರು ಯಾವ ರೀತಿ ಪ್ರಯತ್ನಿಸಿದರೋ ಅದೇ ರೀತಿ ಕೆಲಸ ಮಾಡಲು ಅಲ್ಲಾಹನು ಭಾಗ್ಯ ದಯಪಾಲಿಸಲಿ. ಇನ್ನು ಮುಂದೆ ಸಹ ಸಾತ್ವಿಕರು, ನಿಷ್ಠಾವಂತರಾಗಿ ಆತ್ಮಸಮರ್ಪಣೆಯಿಂದ ಕೆಲಸ ಮಾಡುವ ಕಾರ್ಯಕರ್ತರು ಜಮಾಅತಿಗೆ ಲಭಿಸುವಂತೆ ಅಲ್ಲಾಹನು ಮಾಡಲಿ – ಆಮೀನ್.

ಎರಡನೆಯ ಜನಾಝ಼ ಮುಕರ್‍ರಮ ದೀಪಾ ನೌಫರ್ ಸಾಹಿಬ ಅವರದಾಗಿದೆ. ಜನವರಿ 26ರಂದು ತನ್ನ 47ನೇ ವಯಸ್ಸು ಪ್ರಾಯದಲ್ಲಿ ನಿಧನ ಹೊಂದಿದರು – إِنَّا لِلّٰهِ وَإِنَّا إِلَيْهِ رَاجِعُونَ. ಅವರು ಅಹ್ಮದಿಯಾದ ನಂತರ ನಮಾಝುಗಳನ್ನು ಸಮಯಕ್ಕೆ ಸರಿಯಾಗಿ ನಿರ್ವಹಿಸುತ್ತಿದ್ದರು. ತಹಜ್ಜುದ್ ನಮಾಝ್ ಬಗ್ಗೆ ಸಹ ಲಕ್ಷ್ಯ ನೀಡಿದ್ದರು. ಅವರು ಪವಿತ್ರ ಖುರ್‌ಆನ್ ತಿಲಾವತ್ ಸಹ ಮಾಡುತ್ತಿದ್ದರು. ಅವರು ಕ್ರೈಸ್ತ ಧರ್ಮದಿಂದ ಬಂದವರಾಗಿದ್ದರು. ಅವರು ಅಹ್ಮದಿಯಾದಾಗ ವಿವಿಧ ರೋಗಗಳ ಕಾರಣದಿಂದ ಮೃತ್ಯುವಿಗೆ ಸಮೀಪವಾಗಿದ್ದರು. ಅವರ ಮುಸ್ಲಿಮೇತರ ಡಾಕ್ಟರ್ ಹೇಳುತ್ತಿದ್ದರು: ಆಕೆ ಅಲ್ಲಾಹನನ್ನು ಭೇಟಿಯಾದಾಗ ಆಕೆಯ ಹೃದಯ ಹೊಸ ಉಸಿರು ಪಡೆಯಿತು. ಅವರು ಇಸ್ಲಾಮ್, ಅಹ್ಮದಿಯ್ಯತ್ ಸ್ವೀಕರಿಸುವ ಮೊದಲು ಅವರಿಗೆ ಹೆಪೆಟೈಟಿಸ್ ಸಿ ರೋಗ ಸಹ ಬಾಧಿಸಿತ್ತು. ಬೈಅತ್ ಮಾಡಿದ ನಂತರ ಅಲ್ಲಾಹನು ಅವರಿಗೆ ಅದ್ಭುತಕರವಾಗಿ ರೋಗಶಮನ ದಯಪಾಲಿಸಿದನು. ಪವಾಡ ಸದೃಶವಾದ ಆ ಉಪಶಮನದ ಬಗ್ಗೆ ಆಕೆ ತನ್ನ ಕುಟುಂಬದ ಜನರೊಂದಿಗೆ ಅನೇಕ ಸಾರಿ ಪ್ರಸ್ತಾಪಿಸುತ್ತಿದ್ದರು. ಅವರು ಎರಡು ಸಾರಿ ನನ್ನನ್ನು ಭೇಟಿಯಾಗಿದ್ದರು. ಬಹಳ ನಿಷ್ಠೆಯನ್ನೂ ವಿಧೇಯತೆಯನ್ನೂ ಯಾವಾಗಲೂ ಪ್ರಕಟಿಸುತ್ತಿದ್ದರು. ಅಲ್ಲಾಹನು ಅವರ ಪದವಿಯನ್ನು ಉನ್ನತಗೊಳಿಸಲಿ. ಮಗ್‌ಫಿರತ್ ಮತ್ತು ರಹಮ್ ದಯಪಾಲಿಸಲಿ. ಅವರ ಕುಟುಂಬ ಸಹ ಅಹ್ಮದಿ ಮುಸ್ಲಿಮರಾಗಬೇಕೆಂಬ ಅವರ ಅಭಿಲಾಷೆಯನ್ನು ಅಲ್ಲಾಹನು ಈಡೇರಿಸಿಕೊಡಲಿ – ಆಮೀನ್.

*****

***Friday Sermon delivered by Hadrath Khaleefatul Masih Al Khamis*** *(atba)*

*At Masjid Baithul Futhuh, London. on 09-02-2018.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon